ಆಕಾರದಲ್ಲಿ ಸುರುಳಿಸುತ್ತಿ ಹಿಡಿದು ಕುಳಿತಿದ್ದ ಶ್ರೀಯುತರು, ನನ್ನ ಕಣ್ಣು ಮಿಲಾಯಿಸಿದೊಡನೆ ತುಂಟನಗೆ ಚೆಲ್ಲಿದರು. ಮುಗುಳು ನಗುವೊಂದು ಎದೆ ನಡುಗಿಸಬಲ್ಲದು ಎಂದು ಗೊತ್ತಾಗಿದ್ದು ಅಂದೇ. ಆ ನಗುವಿನಲ್ಲಡಗಿದ್ದ 'ಮಾಡ್ತೀನಿ ಮಕ್ಕಳ ನಿಮಗೆ' ಎಂಬ ಛಲವನ್ನು ಕಂಡು ನನಗೆ ಭಾಷಣದ ವಿಷಯವೇ ಮರೆತುಹೋಯಿತು. 'ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ' ಎಂಬುದು ಅವತ್ತಿನ ವಿಷಯ. ಅದರ ಕೆಳಗೆ ಕಂಸದಲ್ಲಿ 'ಶಿಕ್ಷಕರಿಗೆ ಕಾಲದ ಕರೆ' ಎಂಬ ಉಪಶೀರ್ಷಿಕೆಯನ್ನೂ ಅಚ್ಚುಮಾಡಲಾಗಿತ್ತು. ಇನ್ನೇನು ಕಾರ್ಯಕ್ರಮ ಚಾಲೂ ಆಗಬೇಕು, ಶ್ರೀಯುತರು ಚೇರನ್ನು ಅನಾಮತ್ತು ಹೊತ್ತುತಂದು ವೇದಿಕೆಯಲ್ಲಿ ಸ್ವಯಂ ಸ್ಥಾಪಿತರಾದರು. ಕದನದ ಮೊದಲ ಕಿಡಿ ಹಾರಿತು. ಇನ್ನು ಕುಶಾಲ ತೋಪು ಹಾರುವುದು ಬಾಕಿ. ಬಿಸಿಲಿದ್ದರೂ ಕೋಟುಹಾಕಿ ಟೈಕಟ್ಟಿಕೊಂಡು ಕಿಸೆಗೆ ಗುಲಾಬಿ ಮುಡಿದಿದ್ದ ಪ್ರಿನ್ಸಿಯ ಮುಖದ ಮೇಲೆ, ಈತನಕ ಒಡೆಯದಿದ್ದ ಬೆವರ ಹನಿಗಳು ಈಗ ಒಡೆದವು. ಅಷ್ಟರಲ್ಲಿ 'ಹಚ್ಚೇವು ಕನ್ನಡದ ದೀಪ'ವನ್ನು ಕೀಚಲುಸ್ವರದಲ್ಲಿ ಹುಡುಗಿಯರು ಹಾಡಲು ಶುರುವಿಟ್ಟರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ವಾರ್ಷಿಕ ಚಟುವಟಿಕೆಯ ವರದಿ ಮಂಡಿಸಿದ. ಅದರಲ್ಲಿ ಪ್ರವಾಸದ ಪ್ರಸ್ತಾಪ ಬಂದಾಗ, 'ಉಳುಕು ಉಳುಕು' ಎಂಬ ಅಣಕುವಾಡು ಸಭೆಯಿಂದ ತೂರಿಬಂತು. ಅದಕ್ಕೆ ಸಭೆಯಿಂದ ಗೊಳ್ ಎಂಬ ಪ್ರತಿಕ್ರಿಯೆಯೂ ಸಿಕ್ಕಿತು. ವಿಚಾರಣೆ ಬಳಿಕ ತಿಳಿಯಲ್ಪಟ್ಟ ಸತ್ಯವೆಂದರೆ, ಜೋಗ ಪ್ರವಾಸಕ್ಕೆ ಹೋದಾಗ ಒಬ್ಬ ವಿದ್ಯಾರ್ಥಿನಿ ಜಾರಿಬಿದ್ದು ಕಾಲು ಉಳುಕಿಸಿಕೊಳ್ಳಲು, ಯುವಕರಾಗಿದ್ದ ಜೀವಶಾಸ್ತ್ರದ ಅಧ್ಯಾಪಕರು ಆಕೆಯನ್ನು ಯಾರಿಗೂ ಮುಟ್ಟಗೊಡದೆ ಕಣಿವೆಯ ತಳದಿಂದ ಬಸ್ಸಿನ ತನಕ ತೋಳಾರೆ ಹೊತ್ತು ತಂದಿದ್ದರಂತೆ. ತಪ್ಪು ಅಧ್ಯಾಪಕರದಲ್ಲ. ಅವರ ಪ್ರಾಯದ್ದು ಮತ್ತು ತನ್ನ ಹೆಸರಲ್ಲೇ 'ಜೀವ' ಶಬ್ದವುಳ್ಳ ಶಾಸ್ತ್ರದ್ದು.

ನನಗೆ ಉಪನ್ಯಾಸ ನೀಡಬೇಕೆಂದು ನಿರೂಪಕರು ಆಹ್ವಾನಿಸಿದರು. ನಾನು ಶಸ್ತ್ರಗಳನ್ನು ಹಿಡಿದು ಗತ್ತಿನಿಂದ ಇನ್ನೇನು ಏಳಬೇಕು, ಧಡ್ಡನೆ ಎಂದು ಶ್ರೀಯುತರು ಡಯಾಸನ್ನು ಆಕ್ರಮಿಸಿಕೊಂಡರು. ನಾನು ಪ್ರಿನ್ಸಿಪಾಲರಿಗೆ 'ಅವರಿಗೆ ಅವಕಾಶ ಕೊಡಿ' ಎಂದೆ. ಅವರು ಒಪ್ಪಿ 'ಮೂರು ಮಿನಿಟ ಕೊಡ್ತೀನಿ. ಅದೇನದ ಗಡಗಡ ಮುಗಸು. ಹರಿಕಥೆ ಮಾಡಬ್ಯಾಡ' ಎಂದು ಫತ್ವ ಹೊರಡಿಸಿದರು. ಅದನ್ನು ತೃಣಸಮಾನವಾಗಿ ಪರಿಗಣಿಸಿದ ಶ್ರೀಯುತರು, ಕಾಲೇಜು ಸ್ಥಾಪನೆಯಾದ ದಿನದಿಂದ ಸೇವೆಸಲ್ಲಿಸುತ್ತ ಬಂದಿರುವ ತಮಗೆ ನಿನ್ನೆಮೊನ್ನೆ ಹುಟ್ಟಿರುವ ಪ್ರಿನ್ಸಿಪಾಲರು ಕೊಟ್ಟ ಕಷ್ಟಗಳ ಪಟ್ಟಿ ಮಂಡಿಸತೊಡಗಿದರು. ಸಭೆಯ ಕಡೆಯಿಂದ 'ಇದಪ್ಪ ಹೊಡ್ತ' ಇತ್ಯಾದಿ ಪ್ರಶಂಸೆ ಬಂದವು. ಶಿಶುಪಾಲನ ನೂರು ತಪ್ಪು ಮುಗಿದಿದ್ದವು. ಪ್ರಿನ್ಸಿಪಾಲರು ಕೆಕ್ಕರಿಸಿಕೊಂಡು 'ಎಲ್ಲಿದ್ದೀರೊ?' ಎಂದು ಅವಾಜ್ ಹಾಕಿದರು. ಕೂಡಲೇ ಬಾಗಿಲ ಬಳಿ ಸಜ್ಜಾಗಿದ್ದ ಅವರ ಬಂಟರು ಶ್ರೀಯುತರನ್ನು ಹೊತ್ತೊಯ್ದರು. ಸ್ಟಾಫ್‌ರೂಮಿನಲ್ಲಿ ಕೂಡಿಹಾಕಿರಬೇಕು. ನನ್ನ ಭಾಷಣದುದ್ದಕ್ಕೂ ಅವರ ಕೂಗಾಟ ಕ್ಷೀಣವಾಗಿ ಕೇಳಿಸುತ್ತಿತ್ತು. ಕಮಾಂಡೊ ಕಾರ್ಯಚರಣೆ ನೋಡಿ ಅವಾಕ್ಕಾದೆ. ಅವತ್ತಿನ ಭಾಷಣದಲ್ಲಿ ಈಗಿನ ಕಾಲದ ಶಿಕ್ಷಕರಿಗೆ ಬೌದ್ಧಿಕ ಶಕ್ತಿಯಷ್ಟೆ ದೇಹದಾರ್ಢ್ಯವೂ ಮುಖ್ಯವೆಂಬ ಅಂಶಕ್ಕೆ ಒತ್ತುಕೊಟ್ಟು ಮಾತಾಡಿದೆನೆಂದು ಕಾಣುತ್ತದೆ.

ಸುಂದರವಾಗಿ ಕಷ್ಟಪಟ್ಟು ಪತ್ತಲ ನೇದಂತೆ ಮಾಡಿದ ಭಾಷಣವನ್ನು ನಂತರ ಬರುವ ಭಾಷಣಕಾರ ಹರಿದು ಚಿಂದಿಚೂರು ಮಾಡುವ ಸನ್ನಿವೇಶಗಳು ಎದುರಾಗಬಹುದು. ಅದಕ್ಕೆಲ್ಲ ಭಾಷಣಕಾರರು ತಯಾರಿರಬೇಕು. ಅದೊಂದು ಶರಣ ಜಯಂತಿ. ವೇದಿಕೆಯಲ್ಲಿ ಆಸೀನರಾದವರ ಮೈಕೈಯಲ್ಲಿದ್ದ ಚಿನ್ನವನ್ನು ಕಂಡು ಕೆರಳಿ ಹೋಗಿದ್ದ ನಾನು, ಅನ್ನದಲ್ಲಿ ಒಂದು